# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1427 |
| ಸದಸ್ಯರ ಹೆಸರು | : | ಶ್ರೀ ಅಡಗೂರು ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 20.03.2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಪೊಲೀಸ್ ಭವನ, ಪೊಲೀಸ್ ವೆಲ್ಫೇರ್ ಟ್ರಸ್ಟ್ (ರಿ) ರವರ ವಿರುದ್ಧ ದಿನಾಂಕ:31.03.2001 ರಿಂದ ದಿನಾಂಕ: 31.03.2024 ರವರಗೆ ಆದಾಯ ತೆರಿಗೆ ಇಲಾಖೆ ತೆರಿಗೆ ಬಾಕಿ ಪಾವತಿ ಮಾಡದಿರುವುದರಿಂದ ಇವರುಗಳ ವಿರುದ್ಧ ದಾವೆ ದಾಖಲು ಮಾಡಿರುವ ಬಗ್ಗೆ ಪೂರ್ಣ ಮಾಹಿತಿ ನೀಡುವುದು; | ದಿನಾಂಕ: 31.03.2001 ರಿಂದ 31.03.2024ರ ನಡುವೆ ಮೈಸೂರಿನ ಪೊಲೀಸ್ ವೆಲ್ಫೇರ್ ಟ್ರಸ್ಟ್ ವಿರುದ್ಧ ಆದಾಯ ತೆರಿಗೆ ಇಲಾಖೆಯಿಂದ 09 ನೋಟೀಸ್‌ಗಳನ್ನು ಸ್ವೀಕರಿಸಲಾಗಿದ್ದು, ಒಟ್ಟು ರೂ.1,92,00,052/- ಅನ್ನು ಪೊಲೀಸ್ ಇಲಾಖೆಯ ವಿರುದ್ಧ ಹೊಣೆಗಾರಿಕೆ ಮಾಡಲಾಗಿದೆ. ಈ ಸಂಬಂಧ ಪೊಲೀಸ್ ವೆಲ್ಫೇರ್ ಟ್ರಸ್ಟ್ ವತಿಯಿಂದ ಆಯುಕ್ತರು, ಆದಾಯ ತೆರಿಗೆ ಇಲಾಖೆ, ಮೈಸೂರು ರವರಿಗೆ ಮೇಲ್ಮನವಿ ಸಲ್ಲಿಸಲಾಗಿದೆ. ಸದರಿ ಮೇಲ್ಮನವಿ ತೀರ್ಪು ಬಾಕಿ ಇದೆ. |
| ಆ) | ಪೊಲೀಸ್ ಭವನ ಹಾಗೂ ಪೊಲೀಸ್ ವೆಲ್ಫೇರ್ ಟ್ರಸ್ಟ್‌ಗಳು ಎಷ್ಟು ಹಣ ತೆರಿಗೆ ತುಂಬಬೇಕು ಎಂದು ನೀಡಿರುವ ನೋಟೀಸ್‌ನ ಮಾಹಿತಿ ಹಾಗೂ ಪೊಲೀಸ್ ಆಯುಕ್ತರುಗಳ ಅವಧಿಯಲ್ಲಿ ತೆರಿಗೆ, ಜಿ.ಎಸ್.ಟಿ., ತುಂಬದೆ ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳು ಯಾರು; (ಪೂರ್ಣ ವಿವರ ನೀಡುವುದು). | ಆದಾಯ ತೆರಿಗೆ ನಿಯಮ 12 (ಎ) ರಡಿಯಲ್ಲಿ ದತ್ತಿ ಟ್ರಸ್ಟ್‌ಗಳು, ಕಲ್ಯಾಣ ಸಂಘಗಳು, ಸರ್ಕಾರೇತರ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಮುಂತಾದ ಲಾಭ ರಹಿತ ಸಂಸ್ಥೆಗಳು ತೆರಿಗೆ ವಿನಾಯಿತಿಗೆ ಅರ್ಹವಾಗಿರುವುದಾಗಿ ತಿಳಿಸಲಾಗಿದೆ. ಆದ್ದರಿಂದ ಆದಾಯ ತೆರಿಗೆ ಇಲಾಖೆಯಿಂದ ಸ್ವೀಕೃತವಾಗಿರುವ ನೋಟೀಸಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ತೀರ್ಮ ಬಾಕಿ ಇದೆ.<br>ಜಿ.ಎಸ್.ಟಿ ಮೊತ್ತವನ್ನು ಪಾವತಿ ಮಾಡಲಾಗಿದೆ (ಪ್ರತಿ ಲಗತ್ತಿಸಿದೆ). ಸರ್ಕಾರಿ ಅಧಿಕಾರಿಗಳ ನಿರ್ಲಕ್ಷ್ಯತೆ ಕಂಡು ಬಂದಿರುವುದಿಲ್ಲ. |
| ಇ) | ಆದಾಯ ತೆರಿಗೆ ಇಲಾಖೆಗೆ ಜಿ.ಎಸ್.ಟಿ. ಬಾಕಿ ಕಟ್ಟದೆ ಇರುವ ಬಗ್ಗೆ ಟ್ರಸ್ಟ್ (ರಿ) ಹೂಡಿರುವ ದಾವೆ ಸದ್ಯ ಯಾವ ಹಂತದಲ್ಲಿದೆ, ಎಷ್ಟು ಹಣ ತುಂಬಬೇಕು; ಆ ದಾವೆಗಳಿಗೆ ಹಾಕಿರುವ ತಕರಾರು ಪ್ರತಿ ಹಾಗೂ ಸಂಪೂರ್ಣ ದಾಖಲೆಗಳನ್ನು ಒದಗಿಸುವುದು: | ಎಲ್ಲಾ ಜಿ.ಎಸ್.ಟಿ ಮೊತ್ತವನ್ನು ಪಾವತಿ ಮಾಡಲಾಗಿದೆ (ಪ್ರತಿ ಲಗತ್ತಿಸಿದೆ). |

| | | |
|---|---|---|
| ಈ) | ಆದಾಯ ತೆರಿಗೆ ಇಲಾಖೆ ಬಾಕಿ ಕಟ್ಟಲು ಮೈಸೂರು ನಗರ ಪೊಲೀಸ್ ಸಿಬ್ಬಂದಿಗಳು ಹಾಗೂ ಅಧಿಕಾರಿಗಳಿಂದ (ಪ್ರತಿ ಸದಸ್ಯರುಗಳಿಂದ) ವಂತಿಕೆ ರೂಪದಲ್ಲಿ ಹಣವನ್ನು ಸಿಬ್ಬಂದಿಗಳ ಮತ್ತು ಅಧಿಕಾರಿಗಳ ತಿಂಗಳ ಸಂಬಳದಿಂದ ಕಟಾವು ಮಾಡಿಲಾಗಿದೆಯೇ: ಯಾವ ಯಾವ ಮೂಲಗಳಿಂದ ಹಣ ವಸೂಲಿ ಮಾಡಲಾಗಿದೆ;<br>(ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿಯ ವೇತನದಲ್ಲಿ ಯಾವುದೇ ಹಣವನ್ನು ಕಡಿತಗೊಳಿಸಿರುವುದಿಲ್ಲ. ಬೇರೆ ಯಾವುದೇ ಮೂಲಗಳಿಂದ ಹಣ ಸಂಗ್ರಹಿಸಿರುವುದಿಲ್ಲ. ಆದಾಯ ತೆರಿಗೆ ಇಲಾಖೆಯು ಹೊಣೆಗಾರಿಕೆ ಮಾಡಲಾದ ರೂ.1,97,00,052/-ಗಳ ಮೇಲೆ ಈಗಾಗಲೇ ಮೇಲ್ಮನವಿ ಸಲ್ಲಿಸಲಾಗಿರುತ್ತದೆ. ಸದರಿ ಮೇಲ್ಮನವಿ ತೀರ್ಪು ಬಾಕಿ ಇರುತ್ತದೆ. |
| ಉ) | ಮೈಸೂರು ಪೊಲೀಸ್ ಸಮುದಾಯ ಭವನ ಕಟ್ಟಲು ಮೈಸೂರು ಮಹಾನಗರ ಪಾಲಿಕೆಯಿಂದ ನಕ್ಷೆ ಅನುಮೋದನೆ ಪಡೆದಿರುವ ಪ್ರತಿ ಹಾಗೂ ಅಗ್ನಿಶಾಮಕ ಇಲಾಖೆಯಿಂದ ಪಡೆದಿರುವ ಪರವಾನಗಿ ಪತ್ರವನ್ನು ನೀಡುವುದು? | ಮೈಸೂರು ಪೊಲೀಸ್ ಸಮುದಾಯ ಭವನ ನಿರ್ಮಾಣದ ನಕ್ಷೆಗೆ ಮೈಸೂರು ಮಹಾನಗರ ಪಾಲಿಕೆ ಅನುಮೋದನೆ ದೊರೆತಿದೆ. (ಪ್ರತಿ ಲಗತ್ತಿಸಿದೆ). ಆದರೆ ಅಗ್ನಿಶಾಮಕ ಇಲಾಖೆಯಿಂದ ಯಾವುದೇ ಅನುಮತಿ ಪಡೆಯಲಾಗಿರುವುದಿಲ್ಲ. |

**HD 73 PHS 2025**

(ಡಾ॥ ಜಿ.ಪರಮೇಶ್ವರ)
ಗೃಹ ಸಚಿವರು

ANNEXURE

**B)** Goods and Service Tax (GST) is paid on time. There are no dues so there is no negligence on the part of the officials.

| Sl.No | Assessment Year | Total GST Amount | GST Paid |
|---|---|---|---|
| 1 | 2017-18 | Rs.2025122 | Rs.2025122 |
| 2 | 2018-19 | Rs.2224318 | Rs.2224318 |
| 3 | 2019-20 | Rs.1950488 | Rs.1950488 |
| 4 | 2020-21 | Rs.835934 | Rs.835934 |
| 5 | 2021-22 | Rs.1069800 | Rs.1069800 |
| 6 | 2022-23 | Rs.1869800 | Rs.1869800 |
| 7 | 2023-24 | Rs.1833574 | Rs.1833574 |
| | **Total** | **Rs.1380133** | **Rs.1380133** |

K.R. Bhu

For Commissioner of Police
Mysore City

Scanned with OKEN Scanner